# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/229/13-14

ದಿನಾಂಕ : 26/07/2016

ಉಪಸ್ಥಿತರು: **ಶ್ರೀ ಲೋಕೇಶ್ ಪಿ.ಎನ್** (ಕ.ಆ.ಸೇ)

**ಸಹಾಯಕ ಆಯುಕ್ತರು, ಬಳ್ಳಾರಿ.**

| ವಾದಿಗಳು | ಪ್ರತಿವಾದಿಗಳು |
|---|---|
| ಶ್ರೀಮತಿ ಎಸ್. ರಾಧಾ<br>ಗಂಡ ಎಸ್. ಮಲ್ಲಿಕಾರ್ಜುನ (ಜಿಪಿಎ ಹೋಲ್ಡರ್),<br>LIG 1/26, KHB Colony,<br>ತಿಲಕ್ ನಗರ, ಬಳ್ಳಾರಿ<br><br>(ಶ್ರೀ ಕೆ. ತಿಪ್ಪೇಸ್ವಾಮಿ, ವಕೀಲರು, ಬಳ್ಳಾರಿ) | (1) ತಹಶೀಲ್ದಾರರು, ಸಂಡೂರು<br>(2) ಕಂದಾಯ ನಿರೀಕ್ಷಕರು, ತೋರಣಗಲ್ಲು<br>(3) ಗ್ರಾಮಲೆಕ್ಕಾಧಿಕಾರಿ, ಕುರೇಕುಪ್ಪ<br>(4) ಶ್ರೀಮತಿ ಪಿ. ಲೋಲಾಕ್ಷಮ್ಮ<br>ಗಂಡ ಪಿ. ಹಳ್ಳದರಾಯಪ್ಪ,<br>ಹಳೆ ತಿಮ್ಮನಗೌಡನ ಮನೆ ಹತ್ತಿರ,<br>ಕುರೇಕುಪ್ಪ, ಸಂಡೂರು ತಾಲ್ಲೂಕು<br>(5) ಶ್ರೀ ಪಿ. ಪೂಜಾರಿ ಸಣ್ಣ ಹಳ್ಳದ ರಾಯಪ್ಪ<br>ತಂದೆ ಪಿ. ಸಂಜೀವಪ್ಪ, ಹಂಪದೇವನಹಳ್ಳಿ ಗ್ರಾಮ,<br>ಹೊಸಪೇಟೆ ತಾಲ್ಲೂಕು |

**ದಾವಾ ಜಮೀನಿನ ವಿವರ :-**

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಸಂಡೂರು | ಕುರೇಕುಪ್ಪ | 246/ಎ/2 ಪೈಕಿ | 0.17.50 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಕಂದಾಯ ನಿರೀಕ್ಷಕರು, ತೋರಣಗಲ್ಲು ಇವರ ಎಂ ಆರ್ ನಂ 164/94-95 ಮತ್ತು ಎಂ ನಂ 67/2003-04 ರ ಆದೇಶಗಳ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಠಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ 03/12/2013 ರಿಂದ ಪ್ರಕರಣದ ವಿಚಾರಣೆಯನ್ನು ಪ್ರಾರಂಭಿಸಲಾಯಿತು.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳು ಸಂಡೂರು ತಾಲ್ಲೂಕಿನ ಕುರೇಕುಪ್ಪ ಗ್ರಾಮದ ಸ.ನಂ 246/ಎ/2 ಪೈಕಿ ವಿಸ್ತೀರ್ಣ: 0.17.50 ಎಕರೆ ಜಮೀನಿಗೆ ಪ್ರತಿವಾದಿ 2 ರವರು ಮಾಡಿರುವ ಹಕ್ಕು ಬದಲಾವಣೆ ಸಂಖ್ಯೆ 67/2003-04 ಮತ್ತು 164/1994-95 ರ ಆದೇಶಗಳು ಪ್ರತಿವಾದಿ 4 ಮತ್ತು 5 ರವರ ಹೆಸರಿನಲ್ಲಿ ಹಕ್ಕು ಬದಲಾವಣೆಯಾಗಿದ್ದು, ಮೂಲತ: ಸ. ನಂ. 246A/2 ವಿಸ್ತೀರ್ಣ 0.17.50 ಕರೆ ಜಮೀನನ್ನು ಕ್ರಯಪತ್ರ ಸಂಖ್ಯೆ 161/1995-96 ದಿನಾಂಕ 07/06/1995 ರಲ್ಲಿ ಖರೀದಿಸಲಾಗಿದ್ದು, ಸದರಿ ಕ್ರಯ ಪತ್ರದಂತೆ ಎಂ ಆರ್ ನಂ 64/1996-97 ರಲ್ಲಿ ಹಕ್ಕು ಬದಲಾವಣೆಯಾಗಿದ್ದು, ಸ್ವಾಧೀನಾನುಭವವನ್ನು ಸಹ ಹೊಂದಿರುತ್ತಾರೆಂದು ತಿಳಿಸಿರುತ್ತಾರೆ. ತದನಂತರ ವಾದಿಯ ಹೆಸರಿಗೆ ವಿಸ್ತೀರ್ಣ 0.08.39 ಎಕರೆ ಎಂದು ನಮೂದಿಸಲ್ಪಡುತ್ತಾ ಬಂದಿದ್ದು, ತದನಂತರ ಪ್ರತಿವಾದಿ 4 ರವರಿಗೆ ಎಂ ಆರ್ ಸಂಖ್ಯೆ 67/2003-04 ರಲ್ಲಿ ಹಾಗೂ ಪ್ರತಿವಾದಿ 5 ರವರಿಗೆ ಎಂ ಆರ್ ಸಂಖ್ಯೆ 164/1994-95 ರಲ್ಲಿ ಹಕ್ಕು ಬದಲಾವಣೆಯಾಗಿದ್ದು, ತಿಳಿದುಬಂದಿರುತ್ತದೆಂದು

ತಿಳಿಸುತ್ತಾ, ಮುಂದುವರೆದು ವಾದಿಯು ಖರೀದಿಸಿದ ಜಮೀನಿಗೆ ಹಿಸ್ಸಾ ಮಾಡಿ ಮಾಡಿಕೊಡಲು ಕೋರಿದ್ದು, ಆದರೆ ಈಗಾಗಲೇ ಹಕ್ಕು ಬದಲಾವಣೆಯಾಗಿರುವುದರಿಂದ ವಾದಿಯ ಹೆಸರಿಗೆ ವಿಸ್ತೀರ್ಣವನ್ನು ಹಾಗೂ ಹಿಸ್ಸಾ ಮಾಡಲು ಕೋರಿರುವುದನ್ನು ಸಕ್ಷಮ ಪ್ರಾಧಿಕಾರದಲ್ಲಿ ಪ್ರಶ್ನಿಸಿ ಕೊಳ್ಳಲು ತಿಳಿಸಿ, ಹಿಂಬರಹ ನೀಡಿರುತ್ತಾರೆಂದು ತಿಳಿಸಿರುತ್ತಾರೆ. ಮುಂದುವರೆದು ಪ್ರತಿವಾದಿ 4 ಮತ್ತು 5 ರವರ ಹೆಸರುಗಳಿಗೆ ಆಗಿರುವ ಹಕ್ಕು ಬದಲಾವಣೆಗಳನ್ನು ರದ್ದುಪಡಿಸಲು ಕೋರಿರುತ್ತಾರೆ.

ಪ್ರತಿವಾದಿ 5 ರವರು ದಿನಾಂಕ 18/02/2014 ರಂದು ವಿಚಾರಣೆಗೆ ಹಾಜರಾಗಿ ವಾದಿಯ ಮೇಲ್ಮನವಿಗೆ ಸಂಬಂಧಿಸಿದಂತೆ ತಮ್ಮ ನಿರಾಕ್ಷೇಪಣೆಯನ್ನು ತಿಳಿಸಿರುತ್ತಾರೆ ಹಾಗೂ ಪ್ರತಿವಾದಿ 4 ರವರನ್ನು ಹಾಜರು ಪಡಿಸಲು ಸಮಯ ಕೋರಿರುತ್ತಾರೆ.

ಸದರಿ ಪ್ರಕರಣದಲ್ಲಿನ ಲಭ್ಯ ದಾಖಲೆಗಳನ್ನು ಪರಿಶೀಲಿಸಲಾಯಿತು. ಪ್ರಕರಣದಲ್ಲಿನ ಪ್ರಶ್ನಿತ ಆಸ್ತಿಯನ್ನು ಅಪೀಲುದಾರರು 1995-96 ರಲ್ಲಿ ಖರೀದಿಸಿದ್ದು, ಸದರಿ ಭೂಮಿಯನ್ನು ವಾದಿಗಳಲ್ಲದೇ, ಅಲ್ಲಿ ಖರೀದಿ ಮಾಡಿದವರೆಲ್ಲರೂ, ಸಕ್ಷಮ ಪ್ರಾಧಿಕಾರದ ಅನುಮತಿ ಪಡೆಯದೇ ಅನ್ಯತಾ ಕಾರ್ಯಕ್ಕೆ ಕೃಷಿ ಭೂಮಿಯನ್ನು ಉಪಯೋಗಿಸುತ್ತಿರುವುದು ವಾದಿಯ ವಾದ ಮಂಡನೆಯಿಂದ ತಿಳಿದು ಬರುತ್ತದೆ. ಕಾರಣ ವಾದಿಯ ಕೋರಿಕೆಯಂತೆ ಸದರಿ ಭೂಮಿಯನ್ನು ವಿಭಜನೆ ಮಾಡಲು ಅವಕಾಶವಿಲ್ಲವಾದುದರಿಂದ, ಮೇಲ್ಮನವಿಯನ್ನು ವಜಾಗೊಳಿಸಿ ಆದೇಶಿಸುವುದು ಸೂಕ್ತವೆಂದು ಮನವರಿಕೆಯಾಗಿರುವುದರಿಂದ ಈ ಕೆಳಕಂಡ ಆದೇಶ.

:: ಆದೇಶ ::

ವಾದಿಯ ಮೇಲ್ಮನವಿಯನ್ನು ತಿರಸ್ಕರಿಸಿದೆ.

ಪೀಠಿಕೆಯಲ್ಲಿ ವಿವರಿಸಿದ ಹಿನ್ನಲೆ ಮತ್ತು ಕಾರಣಗಳಿಗಾಗಿ, ಮೇಲ್ಮನವಿಯನ್ನು ವಜಾಗೊಳಿಸಿ, ಪ್ರಕರಣವನ್ನು ವಿಲೇಗೊಳಿಸಿ ಆದೇಶಿಸಿದೆ.

ಪ್ರಶ್ನಿತ ಆಸ್ತಿಯಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ ಕಲಂ 95ರ ಉಲ್ಲಂಘನೆಯಾಗಿದೆಯೇ ಎಂಬುದರ ಕುರಿತು ತಹಶೀಲ್ದಾರರು, ಸಂಡೂರು ಇವರು ಸ್ಥಳ ಪರಿಶೀಲನೆ ಮಾಡಿ ಅಗತ್ಯ ಕ್ರಮವಹಿಸಿ ಕಾನೂನು ಕ್ರಮ ಜರುಗಿಸಲು ಆದೇಶಿಸಿದೆ

ಈ ಆದೇಶವನ್ನು ದಿನಾಂಕ 26/07/2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಸಹಾಯಕ ಆಯುಕ್ತರು,
ಬಳ್ಳಾರಿ

ಗೆ,

ವಾದಿ ಮತ್ತು ಪ್ರತಿವಾದಿಗಳಿಗೆ

ತಹಶೀಲ್ದಾರರು, ಸಂಡೂರು ಇವರಿಗೆ ಸೂಕ್ರ ಕ್ರಮಕ್ಕಾಗಿ.